**<u>ದಿನಾಂಕಃ 18/07/2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**
**<u>ಮುಂದುವರೆದ ಪಾಟೀ ಸವಾಲು: ಆರೋಪಿತರ ಪರ ಶ್ರೀ ಕೆ.ಆರ್.ವಿ. ವಕೀಲರಿಂದಃ</u>**

1. ನನ್ನ ಗಂಡ ತೀರಿಹೋಗುವ ಮುಂಚೆ ಶಿರಂಗಾಲ ಗ್ರಾಮ, ಕುಶಾಲನಗರ ತಾಲ್ಲೂಕು ಹಾಗೂ ಸುಳೆಕೋಟೆ ಗ್ರಾಮದಲ್ಲಿ ವಾಸವಿದ್ದರು. ನನ್ನ ತಂದೆ ತಾಯಿ ಯಾರೂ ಸಹ ಸುಳೇಕೋಟೆ ಗ್ರಾಮದವರು ಅಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಆಧಾರ್ ಕಾರ್ಡ್ ಶಿರಂಗಾಲ ಗ್ರಾಮದಲ್ಲಿ ಇದೆ. ಆದ್ದರಿಂದ ನನಗೂ ಮತ್ತು ಸುಳೆಕೋಟೆ ಗ್ರಾಮಕ್ಕೂ ಏನೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಜಗಳವಾದ ಸೈಟು ನನ್ನ ಗಂಡನಿಗೆ ಸೇರಿದ್ದು. ಅದರ ದಾಖಲಾತಿಗಳನ್ನು ನಾನು ಪೊಲೀಸರಿಗೆ ಕೊಟ್ಟಿರುವುದು ನನಗೆ ಗೊತ್ತಿಲ್ಲ. ಸೈಟಿನ ನಂಬರ್ ಮತ್ತು ಚಕ್ಕುಬಂದಿ ನನಗೆ ಗೊತ್ತಿಲ್ಲ. ಜಗಳವಾದ ಸ್ಥಳ ಮತ್ತು ಆರೋಪಿತರ ಮನೆ ಹತ್ತಿರ ಇವೆ, ಸದರಿ ಜಾಗಕ್ಕೂ ಮತ್ತು ಆರೋಪಿತರ ಮನೆಗೂ ಮಧ್ಯೆ ರಸ್ತೆ ಇದೆ. ನಾನು ಪೊಲೀಸರ ಮುಂದೆ ಈ ಸಂಬಂಧ ಹೇಳಿಕೆ ನೀಡಿದ್ದೇನೆ. ದಿಃ11/04/2017 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಪೊಲೀಸರು ಹೇಳಿಕೆ ಬರೆದುಕೊಂಡ ನಂತರ ನನಗೆ ಓದಿ ಹೇಳಿದರು ನಾನು ಕೇಳಿಸಿಕೊಂಡೆ. ಆ ಹೇಳಿಕೆಯಲ್ಲಿ ಜಂಜರ್ ನಂಬರ್ ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಸೈಟು ಪಿರಿಯಾಪಟ್ಟಣ ತಾಲ್ಲೂಕು, ಅಧ್ಯಕ್ಷರು, ಸವಿತಾ ಸಮಾಜ ಹಿತರಕ್ಷಣಾ ಸಮಿತಿಗೆ ಹಕ್ಕುಪತ್ರ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದರ ಜಂಜರ್ ನಂಬರ್ 185 ಎಂದರೆ ಸರಿಯಲ್ಲ. ಸವಿತ ಸಮಾಜ ಹಿತರಕ್ಷಣಾ ಸಮಿತಿಗೆ 1 ಮತ್ತು 2 ನೇ ಆರೋಪಿತರು ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಎಂದರೆ ನನಗೆ ಗೊತ್ತಿಲ್ಲ.

2. ಸವಿತಾ ಸಮಾಜ ಹಿತರಕ್ಷಣಾ ಸಮಿತಿ, ಕಾರ್ಯದರ್ಶಿ ನನ್ನ ಗಂಡನ ವಿರುದ್ಧ ದಾವೆಯನ್ನು ಹೂಡಿದ್ದರು, ಅದು ನನ್ನ ಗಂಡನ ವಿರುದ್ಧ ಆದೇಶವಾದ ಕಾರಣ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಜಗಳವಾಗುವ ಕಾಲಕ್ಕೆ ಪುಟ್ಟಲಕ್ಷ್ಮಮ್ಮ ಮತ್ತು ಸೌಮ್ಯ ಎಂಬುವವರು ಹಾಜರಿದ್ದರು. ಪ್ರಾಸಾ–2 ನನ್ನ ಭಾವನ ಸೊಸೆ. ಚಾಸಾ–3

ನನ್ನ ಭಾವ, ಫ್ರಾಸಾ–3 ಚಾಸಾ–3 ರವರ ಮಗ. ಆರೋಪಿತರು ನಮ್ಮ ವಿರುದ್ಧ ದೂರು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಘಟನಾ ಕಾಲಕ್ಕೆ ಆರೋಪಿತರು ಬಂದ ವಾಹನದ ಸಂಖ್ಯೆ ನನಗೆ ನೆನಪಿಲ್ಲ. ಘಟನೆಯಾದ 2 ದಿನಗಳ ನಂತರ ಪೊಲೀಸರು ಕುಶಾಲನಗರ ಆಸ್ಪತ್ರೆಗೆ ಬಂದು ನನ್ನ ಸಹಿಯನ್ನು ಪಡೆದಿರುತ್ತಾರೆ. ನಾನು ಪೊಲೀಸರಿಗೆ ಮರು ಹೇಳಿಕೆ ಕೊಟ್ಟಿಲ್ಲ. ಮು.ಮಾ.1 ರೀತಿಯ ದೊಣ್ಣೆಯನ್ನು ಎಲ್ಲಾ ಕಡೆ ಉಪಯೋಗಿಸುತ್ತಾರೆ ಎಂದರೆ ಸರಿ. ಪೊಲೀಸರು ಮನೆಯ ಹತ್ತಿರ ಬಂದಾಗ ನಾನು ಇರಲಿಲ್ಲ. ಪೊಲೀಸರಿಗೆ ದೊಣ್ಣೆಯನ್ನು ಮತ್ತು ಬಟ್ಟೆಗಳನ್ನು ಯಾರು ಕೊಟ್ಟರು ಎಂದು ಗೊತ್ತಿಲ್ಲ.

3. ನಾನು ಸುಳೆಕೋಟೆಯ ಗ್ರಾಮದ ನನ್ನ ಗಂಡನಿಗೆ ಸೇರಿದ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ಸದರಿ ಮನೆಯ ನಂಬರ್ ಹೇಳಲು ಗೊತ್ತಿಲ್ಲ, ಅದರ ದಾಖಲಾತಿಗಳನ್ನು ಪೊಲೀಸರಿಗೆ ಕೊಟ್ಟಿಲ್ಲ. ನನಗೆ ಮತ್ತು ಆರೋಪಿತರಿಗೆ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳದ ಜಾಗ ಸವಿತಾ ಸಮಾಜ ಹಿತರಕ್ಷಣಾ ಸಮಿತಿಗೆ ಸೇರಿದ್ದು, ಸದರಿ ಜಾಗವನ್ನು ಲಪಟಾಯಿಸಲು ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಕೊಲೆ ಬೆದರಿಕೆಯನ್ನು ನಾನು ಹಾಗೂ ಅಲ್ಲಿ ನೆರೆದಿದ್ದಂತ ಬೇರೆ ಜನರು ಕೇಳಿಸಿಕೊಂಡರು. ಕೊಲೆ ಬೆದರಿಕೆಯನ್ನು ಚಾಸಾ–5–ಪುಟ್ಟಲಕ್ಷ್ಮಮ್ಮ ಮತ್ತು ಚಾಸಾ–6 ಸೌಮ್ಯ ಮತ್ತು ಇತರರು ಕೇಳಿಸಿಕೊಂಡಿರುತ್ತಾರೆ. ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಅವರು ನನಗೆ ಮಾನಭಂಗ ಮಾಡಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ನ್ನು ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಸುಳೆಕೋಟೆ ಗ್ರಾಮದಲ್ಲಿ ವಾಸಿಸುತ್ತಿಲ್ಲ ಎಂದರೆ ಸರಿಯಲ್ಲ.

4. ಫ್ರಾಸಾ–2 ಮತ್ತು 3 ಮತ್ತು ಚಾಸಾ–3 ರವರು ನನ್ನ ಜೊತೆಯಲ್ಲಿ ವಾಸವಿಲ್ಲ. ಅವರ ಮನೆ ಮತ್ತು ನನ್ನ ಮನೆ ಅಕ್ಕಪಕ್ಕ ಇವೆ ಎಂದರೆ ರಸ್ತೆಯ ಒಂದು ಬದಿಗೆ ನನ್ನ ಮನೆ ಮತ್ತು ಇನ್ನೊಂದು ಬದಿಗೆ ಅವರ ಮನೆ ಇದೆ. ಹಳೆ ದ್ವೇಷ ಇದ್ದ ಕಾರಣ ಆರೋಪಿತರ ಮೇಲೆ ಜಿದ್ದು ಸಾಧಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಹತ್ತಿರ ನನ್ನ ಇಬ್ಬರು ಭಾವಂದಿರ ಮನೆ ಇದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲ ಸಂಗತಿಗಳು ಸುಳ್ಳು

ಎಂದರೆ ಸರಿಯಲ್ಲ. ನಾನು ಸುಳಿಕೋಟೆ ಗ್ರಾಮದ ವಾಸಿಯಲ್ಲ, ಕೊಡಗು ಜಿಲ್ಲೆ, ಕುಶಾಲನಗರ ತಾಲ್ಲೂಕು, ಶಿರಂಗಾಲ ಗ್ರಾಮದ ವಾಸಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**
**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**